# ಎಲ್ಲಾ ಕಲಾ ಪ್ರಕಾರಗಳನ್ನು ಸಂಯೋಜಿಸುವುದು

ನಿಮಗೆ ಗೊತ್ತೆ?



**ಕೊಳಲು**

ನಿಮ್ಮ ಪಠ್ಯಪುಸ್ತಕಕ್ಕೆ ಕೊಳಲು ಎಂದು ಹೆಸರು ಕೊಡಲಾಗಿದೆ. ಇದು ಮಾಂತ್ರಿಕ ಮತ್ತು ಸುಮಧುರವಾದ ಧ್ವನಿಯನ್ನು ಹೊಂದಿರುವ ಸಂಗೀತ ವಾದ್ಯವಾಗಿದ್ದು, ಇದನ್ನೂ ಎಲ್ಲರೂ ಇಷ್ಟಪಡುತ್ತಾರೆ. ಕೊಳಲನ್ನು ಬಿದಿರಿನಿಂದ ತಯಾರಿಸಲಾಗುತ್ತದೆ ಎಂದು ನಿಮಗೆ ತಿಳಿದಿದೆಯೇ? ನೀವು ಸ್ವತಃ ಅದನ್ನು ತಯಾರಿಸಬಹುದು ಮತ್ತು ಹಾಗಯೇ ನುಡಿಸಬಹುದು. ನೀವು ಜಾತ್ರೆ ಅಥವಾ ಸ್ಥಳೀಯ ಮೇಳಕ್ಕೆ ಹೋದಾಗ, ಅಲ್ಲಿ ಯಾರಾದರೂ ಆಟಿಕೆಗಳನ್ನು ಮಾರಾಟ ಮಾಡುತ್ತಿರುತ್ತಾರೆ ಮತ್ತು ಕೊಳಲು ನುಡಿಸುತ್ತಿರುತ್ತಾರೆ, ಮತ್ತು ಖಂಡಿತವಾಗಿ ನೀವೆಲ್ಲರೂ ಆ ಶಬ್ದಕ್ಕೆ ಆಕರ್ಷಿತರಾಗುತ್ತೀರಿ. ಮತ್ತು ಅದೇ ಕೊಳಲನ್ನು ನೃತ್ಯಗಳಲ್ಲಿ ನುಡಿಸಲಾಗುತ್ತದೆ ಮತ್ತು ನಾಟಕದಲ್ಲಿ ಪರಿಕರವಾಗಿ ಬಳಸಲಾಗುತ್ತದೆ. ಕೊಳಲನ್ನು ಕಾಗದ, ಬಿದಿರು ಅಥವಾ ಜೇಡಿಮಣ್ಣಿನಿಂದ ಸಹ ತಯಾರಿಸಬಹುದು ಅಥವಾ ಕಾಡಿನಲ್ಲಿ ಅಥವಾ ಹೊಲಗಳಲ್ಲಿ ಯಾರಾದರೂ ಕೊಳಲು ನುಡಿಸುತ್ತಿರುವ ದೃಶ್ಯವನ್ನು ಚಿತ್ರಿಸಬಹುದು.

0337CH20

ಎಲ್ಲಾ ಕಲಾ ಪ್ರಕಾರಗಳು ಪರಸ್ಪರ ಭಿನ್ನವಾಗಿವೆ; ಅದೇ ಸಮಯದಲ್ಲಿ ಅವೆಲ್ಲವೂ ಅನೇಕ ಸಮಾನವಾದ ಲಕ್ಷಣಗಳನ್ನು ಹೊಂದಿವೆ ಮತ್ತು ಪರಸ್ಪರ ಒಂದಕ್ಕೊಂದು ಸಂಪರ್ಕ ಹೊಂದಿವೆ. ಉದಾಹರಣೆಗೆ, ಸ್ವರ, ಲಯ, ಭಾವ ಮತ್ತು ತಾಳಗಳು — ಸಂಗೀತ, ನೃತ್ಯ, ರಂಗಭೂಮಿ ಮತ್ತು ದೃಶ್ಯ ಕಲೆಗಳಂತಹ ಎಲ್ಲಾ ಕಲಾ ಪ್ರಕಾರಗಳಿಗೆ ಸಂಬಂಧಿಸಿವೆ. ಅವೆಲ್ಲವೂ ಚಲನೆ, ಲಯ ಮತ್ತು ಸಂವಹನ ನಡೆಸಲು ತಮ್ಮದೇ ಆದ ಭಾಷೆಯನ್ನು ಹೊಂದಿದ್ದಾವೆ. ಕಲೆಯ ಮೂಲಕ ನೀವು ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸಬಹುದು.

ಇಲ್ಲಿ, ಎಲ್ಲಾ ಕಲಾ ಪ್ರಕಾರಗಳನ್ನು ಒಟ್ಟಿಗೆ ತರುವ ಕೆಲವು ಚಟುವಟಿಕೆಗಳನ್ನು ನಾವು ಹೊಂದಿದ್ದೇವೆ - ನೀವು ಈ ಚಟುವಟಿಕೆಗಳನ್ನು ಮಾಡಬಹುದು ಮತ್ತು ಆನಂದಿಸಬಹುದು!



© NCERT not to be republished

## ಚಟುವಟಿಕೆ ಕಲಾ ಪ್ರಕಾರಗಳ ಒಗ್ಗೂಡಿಸುವಿಕೆ

ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ನಂದಿಕೇಶ್ವರನ್ನು ಸಂಸ್ಕೃತದಲ್ಲಿ ರಚಿಸಿದ, ಅಭಿನಯ ದರ್ಪಣದ ನಾಲ್ಕು ಸಾಲುಗಳ ಪದ್ಯದ ಉದಾಹರಣೆ ಇಲ್ಲಿದೆ. ಸಾಮಾನ್ಯವಾಗಿ, ಕಲಾವಿದರು ತಮ್ಮ ಪ್ರದರ್ಶನಗಳನ್ನು ಪ್ರಾರಂಭಿಸುವ ಮೊದಲು ಇದನ್ನು ಪಠಿಸುತ್ತಾರೆ. ನೀವು ಅದನ್ನು ಕ್ರಿಯೆಯೊಂದಿಗೆ ಜೋರಾಗಿ ಓದಬಹುದು. ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೀವು ವೀಡಿಯೊಗಳನ್ನು ಸಹ ನೋಡಬಹುದು.

*आंगिकम भुवनम यस्य, वाचिकं सर्व वाङ्ग्मयम*
*आहार्यं चन्द्र ताराधि, तं वन्दे(नुमः) सात्विकं शिवम्॥*

ಅಂಗಿಕಂ ಭುವನಂ ಯಸ್ಯ,
ವಾಚಿಕಂ ಸರ್ವ ವಾಙ್ಮಯಂ.
ಆಹಾರ್ಯಂ ಚಂದ್ರ ತಾರಾದಿ
ತಮ್ ವಂದೇ(ನಮಃ) ಸಾತ್ವಿಕಂ ಶಿವಂ.

**ಅರ್ಥ**

ದೇಹದಿಂದಲೆ ಇಡೀ ಬ್ರಹ್ಮಾಂಡದ ಚಲನವಲನಗಳನ್ನು ತೋರಿಸುವ, ಮಾತು ಅಥವಾ ಹಾಡಿನಿಂದಲೇ ಜಗತ್ತಿನೆಲ್ಲಾ ಶಬ್ದಗಳನ್ನು ಹೊರಡಿಸುವ, ಚಂದ್ರ ಮತ್ತು ನಕ್ಷತ್ರಗಳನ್ನೆ ವಸ್ತ್ರವನ್ನಾಗಿ ಅಲಂಕರಿಸಿಕೊಳ್ಳುವ, ಆ ಪರಮ ಸಾತ್ವಿಕ ದೈವತ್ವಕ್ಕೆ(ನಟರಾಜನಿಗೆ) ತಲೆಬಾಗುತ್ತೇನೆ.

ಇದು ನೀವು ಕಲಿಯುತ್ತಿರುವ ಎಲ್ಲಾ ನಾಲ್ಕು ಕಲಾ ಪ್ರಕಾರಗಳನ್ನು ಒಟ್ಟುಗೂಡಿಸುತ್ತದೆ-

**ಆಂಗಿಕ** - ಚಲನೆ, ಕ್ರಿಯೆ ಮತ್ತು ಅಭಿವ್ಯಕ್ತಿಯೊಂದಿಗೆ ಆಂಗಿಕವಾಗಿ ಪ್ರದರ್ಶಿಸುವುದು

**ವಾಚಿಕ** - ಮಾತು, ಸಂಭಾಷಣೆ, ಹಾಡುಗಳು ಮತ್ತು ಸಾಹಿತ್ಯ ಪಠ್ಯ.

**ಆಹಾರ್ಯ** - ವೇಷಭೂಷಣಗಳು, ಆಭರಣಗಳು, ಶಿಲ್ಪಕಲೆ, ಚಿತ್ರಕಲೆ.

**ಸಾತ್ವಿಕ** - ಕಲಾವಿದ ಮತ್ತು ಪ್ರೇಕ್ಷಕರಿಗೆ ಆಳವಾದ ಭಾವನಾತ್ಮಕ ಆಧ್ಯಾತ್ಮಿಕ ಅನುಭವ.

© NCERT not to be republished

## ಚಟುವಟಿಕೆ ೨ ಕೊಳಲು

ನೀವು ಕೊಳಲನ್ನು ತಯಾರಿಸಬಹುದು, ಇದಕ್ಕಾಗಿ ನಿಮಗೆ ದಪ್ಪ ಚಾರ್ಟ್ ಪೇಪರ್, ಅಂಟು, ಒಂದು ಜೋಡಿ ಕತ್ತರಿ ಮತ್ತು ಕೆಲವು ಕ್ರೇಯಾನ್‌ಗಳು ಅಥವಾ ಬಣ್ಣದ ಪೆನ್ಸಿಲ್‌ಗಳು ಮಾತ್ರ ಬೇಕಾಗುತ್ತವೆ.

- ಚಾರ್ಟ್ ಪೇಪರ್‌ನಲ್ಲಿ ಕೊಳಲು ಚಿತ್ರವನ್ನು ಚಿತ್ರಿಸಿ. ಇದನ್ನು ಸಿಲಿಂಡರ್ ಆಕಾರದಲ್ಲಿ ಉರುಳಿಸಿ ಮತ್ತು ಅಂಚುಗಳಿಗೆ ಸ್ವಲ್ಪ ಅಂಟು ಸೇರಿಸಿ. ಅದರಲ್ಲಿ ಸಣ್ಣ ರಂಧ್ರಗಳನ್ನು ಹಾಕಿ, ಮತ್ತು ಈಗ ನಿಮ್ಮ ಕೊಳಲು ಸಿದ್ಧವಾಗಿದೆ.
- ನೀವು ಕೊಳಲಿನ ರೇಖಾಚಿತ್ರವನ್ನು ಸಹ ಮಾಡಬಹುದು, ಅದರ ಸುತ್ತಲೂ ಜನರು, ಪ್ರಾಣಿಗಳು ಮತ್ತು ಕೊಳಲಿ ಸುತ್ತಲಿರುವ ವಸ್ತುಗಳಂತಹ ಹಲವಾರು ವಸ್ತುಗಳನ್ನು ಸೇರಿಸಬಹುದು, ಪ್ರಾಣಿಗಳು, ಹೂವುಗಳು ಮುಂತಾದ ಕಾಡಿನ ಆಸಕ್ತಿದಾಯಕ ವಸ್ತುಗಳ ಚಿತ್ರವನ್ನು ಬಿಡಿಸಬಹುದು.
- ಈಗ, ಕೊಳಲನ್ನು ಥೀಮ್ ಮತ್ತು ನೀವು ಚಿತ್ರಿಸಿದ ಚಿತ್ರಪಟ್ಟವನ್ನು ಬಳಸಿಕೊಂಡು ಕಥೆಯನ್ನು ರಚಿಸಿ. ಕೆಲವು ಕ್ರಿಯೆಗಳ ಜೊತೆಗೆ ಅದನ್ನು ತರಗತಿಯಲ್ಲಿ ತೋರಿಸಿ.
- ನೀವು ನಿಮ್ಮ ಸುತ್ತಲಿನ ಯಾವುದೇ ವಸ್ತುವನ್ನು ಸಹ ಬಳಸಬಹುದು ಮತ್ತು ಕಥೆಯನ್ನು ನಿರೂಪಿಸುವುದಕ್ಕಾಗಿ ಅದನ್ನು ಇಂಪ್ರೊವೈಷೇನ್ ಮಾಡಬಹುದು. ನೀವು ಕೊಳಲನ್ನು ಪರಿಕರವಾಗಿ ಸಹ ಬಳಸಬಹುದು.
- ನಿಮ್ಮನ್ನು ಸಂಗೀತ ವಾದ್ಯವಾದ — ಕೊಳಲು ಎಂದು ಕಲ್ಪಿಸಿಕೊಳ್ಳಿ ಮತ್ತು ಅಭಿನಯಿಸಿ.
- ಕೊಳಲು ಹಾಡು ಅಥವಾ ರಾಗದೊಂದಿಗೆ ನೀವು ಸರಳ ಚಲನೆಗಳು ಮತ್ತು ಕುಣಿತ ಹೆಜ್ಜೆಗಳನ್ನು ರಚಿಸಬಹುದು.

**ಶಿಕ್ಷಕರ ಟಿಪ್ಪಣಿ**

ಮಕ್ಕಳನ್ನು ಕೊಳಲು ಧ್ವನಿಯನ್ನು ಕೇಳುವಂತೆ ಮಾಡಬಹುದು ಮತ್ತು ದನಗಳ ಹಿಂಡಿಯನ್ನು ಮುನ್ನಡೆಸುವಾಗ ಭಗವಾನ್ ಶ್ರೀಕೃಷ್ಣನು ಹೊಲಗಳಲ್ಲಿ ಕೊಳಲನ್ನು ನುಡಿಸುವುದನ್ನು ಊಹಿಸಿಕೊಳ್ಳಬಹುದು. ಅವರು ಈ ವಿಷಯದ ಮೇಲೆ ಜಾನಪದ ಗೀತೆಯನ್ನೂ ಕಲಿಯಬಹುದು. ಎಲ್ಲಾ ಚಟುವಟಿಕೆಗಳನ್ನು ೪ ರಿಂದ ೫ ವಿದ್ಯಾರ್ಥಿಗಳ ಗುಂಪುಗಳಾಗಿ ವಿಂಗಡಿಸಬಹುದು ಮತ್ತು ಇಡೀ ತರಗತಿಯನ್ನು ತೊಡಗಿಸಿಕೊಳ್ಳಬಹುದು.




© NCERT not to be republished

## ಚಟುವಟಿಕೆ ೩ ಪ್ರಕೃತಿಯ ಸಮೀಪ



ನಾವೆಲ್ಲರೂ ಪ್ರಕೃತಿಯನ್ನು ಪ್ರೀತಿಸುತ್ತೇವೆ, ನಾವು ಅದನ್ನು ಅನುಭವಿಸಲು ಪ್ರಯತ್ನಿಸುತ್ತೇವೆ ಮತ್ತು ಪ್ರಕೃತಿಯ ಬಳಿ ವಾಸಿಸುತ್ತೇವೆ ಹಾಗೂ ಶಬ್ದಗಳು, ಬಣ್ಣಗಳು ಮತ್ತು ಹಸಿರನ್ನು ಆನಂದಿಸುತ್ತೇವೆ. ನೀವೆಲ್ಲರೂ ನಿಮ್ಮ ತರಗತಿಯೊಳಗೆ ಅರಣ್ಯವನ್ನು ರಚಿಸಬಹುದು.

- ಹಾಳೆಯ ಮಧ್ಯದಲ್ಲಿ ಒಂದು ಹೂವನ್ನು ಮಾಡಿ. ನಿಮ್ಮ ಗುಂಪಿನಲ್ಲಿರುವ ಪ್ರತಿಯೊಂದು ಮಗುವು ಹೂವಿನ ಸುತ್ತಲೂ ಏನನ್ನಾದರೂ ಸೇರಿಸುತ್ತದೆ ಮತ್ತು ಉದ್ಯಾನ ಅಥವಾ ಕಾಡಿನ ಚಿತ್ರವನ್ನು ರಚಿಸುತ್ತದೆ.
- ಹೂವುಗಳು, ಪಕ್ಷಿಗಳು, ಮರಗಳು ಮತ್ತು ಪ್ರಾಣಿಗಳನ್ನು ಒಳಗೊಂಡಿರುವ ಕಥೆಯನ್ನು ರಚಿಸಿ.
- ನೀವು ಕಾಡಿನ ಮೂಲಕ ನಡೆಯುತ್ತಿರುವಂತೆ ತಿರುಗಾಡಿ.
- ನೀವು ಉತ್ಸುಕರಾಗಿದ್ದೀರಾ? ಕುತೂಹಲ ಇದೆಯೇ?
- ನೀವು ಏನನ್ನು ನೋಡುತ್ತೀರಿ ಎಂದು ನೀವು ಊಹಿಸುತ್ತೀರೋ ಅದಕ್ಕೆ ಪ್ರತಿಕ್ರಿಯಿಸಿ (ನಿಮ್ಮ ನೆಚ್ಚಿನ ಪ್ರಾಣಿ, ಹೂವುಗಳ ವಾಸನೆ, ದೊಡ್ಡ ಬಂಡೆಗಳು ಇತ್ಯಾದಿ).
- ಕಾಡು ಅಥವಾ ತೋಟದಲ್ಲಿ ನೀವು ಯಾವ ರೀತಿಯ ಶಬ್ದಗಳನ್ನು ಕೇಳುತ್ತೀರಿ? (ಪಕ್ಷಿಗಳ ಚಿಲಿಪಿಲಿ, ನೀರು ಹರಿಯುತ್ತಿರುವುದು) ಅವುಗಳ ಶಬ್ದಗಳನ್ನು ಉತ್ಪಾದಿಸಲು ಪ್ರಯತ್ನಿಸಿ.
- ನೀವು ಕಾಡು ಅಥವಾ ಉದ್ಯಾನವನದಂತಹ ನೈಸರ್ಗಿಕ ಪರಿಸರದಲ್ಲಿ ಇದ್ದೀರಿ ಎಂದು ಭಾವಿಸಿ.

**ಶಿಕ್ಷಕರ ಟಿಪ್ಪಣಿ**
ಮಕ್ಕಳು ಪ್ರಾಣಿಗಳು, ಪಕ್ಷಿಗಳು ಮತ್ತು ನಿಸರ್ಗದ ಮೇಲಿನ ಹಾಡುಗಳನ್ನು ಕಲಿಯಬಹುದು. ಎಲ್ಲಾ ಚಟುವಟಿಕೆಗಳನ್ನು ೪-೫ ವಿದ್ಯಾರ್ಥಿಗಳ ಗುಂಪುಗಳಾಗಿ ವಿಂಗಡಣೆ ಮಾಡಬಹುದು, ಇದರಿಂದ ಇಡೀ ತರಗತಿಯು ಒಳಗೊಳ್ಳುವಂತಾಗುತ್ತದೆ.



© NCERT not to be republished

## ಚಟುವಟಿಕೆ ೪ ಆಚರಣೆಗಳಿಗಾಗಿ ಹಬ್ಬ

ನಾವೆಲ್ಲರೂ ವಿವಿಧ ಹಬ್ಬಗಳನ್ನು ಆಚರಿಸುತ್ತೇವೆ. ನಾವು ಸಾಮಾನ್ಯವಾಗಿ ದೊಡ್ಡ ಹಬ್ಬಗಳ ಸುತ್ತಲೂ ರಜಾದಿನಗಳನ್ನು ಪಡೆಯುತ್ತೇವೆ, ಮತ್ತು ಅವು ನಮ್ಮ ಜೀವನದಲ್ಲಿ ಸಂತೋಷ ಮತ್ತು ಬಣ್ಣವನ್ನು ತರುತ್ತವೆ. ಸಣ್ಣ ಅಥವಾ ದೊಡ್ಡ ಹಬ್ಬವನ್ನು ಆಚರಿಸುವುದು ನಮಗೆ ಸಂತೋಷವನ್ನು ನೀಡುತ್ತದೆ, ಏಕೆಂದರೆ ನಾವು ಹೊಸ ಬಟ್ಟೆಗಳನ್ನು ಪಡೆಯುತ್ತೇವೆ, ಉತ್ತಮ ಆಹಾರವನ್ನು ಪಡೆಯುತ್ತೇವೆ, ಸ್ನೇಹಿತರು ಮತ್ತು ಸಂಬಂಧಿಕರನ್ನು ಭೇಟಿಯಾಗುತ್ತೇವೆ ಮತ್ತು ನಮ್ಮ ಮನೆಗಳನ್ನು ಸ್ವಚ್ಛಗೊಳಿಸುತ್ತೇವೆ ಮತ್ತು ಅಲಂಕರಿಸುತ್ತೇವೆ.

**ಶಿಕ್ಷಕರ ಟಿಪ್ಪಣಿ**

ಕಲಾ ಪ್ರಕಾರಗಳ ನಡುವೆ ಸಂಪರ್ಕವನ್ನು ನಿರ್ಮಿಸುವುದು ಈ ಚಟುವಟಿಕೆಯ ಹಿಂದಿನ ಪ್ರಮುಖ ಆಲೋಚನೆಯಾಗಿದೆ.

- ಮಕ್ಕಳು ಹಬ್ಬದ ಹಾಡನ್ನು ಕಲಿಯಬಹುದು.
- ವಿಶೇಷ ಸಂದರ್ಭಗಳಲ್ಲಿ ಶಾಲಾ ಸಭೆಯಲ್ಲಿ ಚಟುವಟಿಕೆಗಳನ್ನು ಪ್ರಸ್ತುತಪಡಿಸಬಹುದು. ಒಂದು ವಿಷಯವಸ್ತುವಿನ ಆಧಾರದ ಮೇಲೆ ವಿವಿಧ ಕಲಾ ಪ್ರಕಾರಗಳಿಗಾಗಿ ವರ್ಗವನ್ನು ಗುಂಪುಗಳಾಗಿ ವಿಂಗಡಿಸಿ. ಇದು ಮಕ್ಕಳಿಗೆ ಪ್ರೇಕ್ಷಕರನ್ನು ಎದುರಿಸಲು ಮತ್ತು ಕಲಾ ಪ್ರಕಾರಗಳ ನಡುವಿನ ಸಂಪರ್ಕದ ಬಗ್ಗೆ ತಿಳುವಳಿಕೆಯನ್ನು ಬೆಳೆಸಲು ಅವಕಾಶ ನೀಡುತ್ತದೆ.

- ನಾವು ಒಟ್ಟಿಗೆ ಆಚರಿಸುವ ಹಬ್ಬವನ್ನು ಆರಿಸಿ
- ನೀವು ಅದನ್ನು ಹೇಗೆ ಆಚರಿಸುತ್ತೀರಿ ಮತ್ತು ಯಾವ ಸಿದ್ಧತೆಗಳು ಬೇಕಾಗುತ್ತವೆ, ಯಾವ ವಿಶೇಷ ಭಕ್ಷ್ಯಗಳು ಅಥವಾ ಆಹಾರ ಪದಾರ್ಥಗಳನ್ನು ತಯಾರಿಸಲಾಗುತ್ತದೆ, ನಿಮ್ಮ ಮನೆಯನ್ನು ನೀವು ಹೇಗೆ ಅಲಂಕರಿಸುತ್ತೀರಿ ಮತ್ತು ಯಾವ ಹಾಡುಗಳು ಹಾಗೂ ನೃತ್ಯಗಳು ಆ ಹಬ್ಬಕ್ಕೆ ಸಂಬಂಧಿಸಿವೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಚರ್ಚಿಸಿ.

ವಿವಿಧ ಗುಂಪುಗಳು ಈ ಕೆಳಗಿನವುಗಳನ್ನು ಮಾಡಬಹುದು;

- ನಿರ್ದಿಷ್ಟ ಹಬ್ಬಕ್ಕಾಗಿ ಕಾಗದದ ಕಟೌಟ್‌ಗಳೊಂದಿಗೆ ರಂಗೋಲಿ ಅಥವಾ ಇತರ ಅಲಂಕಾರಗಳನ್ನು ರಚಿಸಿ.
- ಆ ಹಬ್ಬವನ್ನು ಆಧರಿಸಿದ ಹಾಡನ್ನು ಕಲಿಯಿರಿ.
- ಅಡುಗೆ ಪಾತ್ರೆಗಳನ್ನು ಬಳಸಿ ಅದನ್ನು ಹಾಡಿ.
- ಹಬ್ಬದ ಆಚರಣೆಯ ಸಮಯದಲ್ಲಿ ನಡೆದ ಒಂದು ಘಟನೆಯನ್ನು ಹಂಚಿಕೊಳ್ಳಿ.
- ಆಚರಿಸಲಾಗುತ್ತಿರುವ ಹಬ್ಬಕ್ಕೆ ಸಂಬಂಧಿಸಿದ ಕಥೆಯನ್ನು ಹಂಚಿಕೊಳ್ಳಿ ಮತ್ತು ಅಭಿನಯಿಸಿ.
- ಸಂಗೀತದ ಶಬ್ದಗಳಿಗೆ ಅದೇ ಅಡುಗೆ ಪಾತ್ರೆಗಳನ್ನು ಬಳಸಿಕೊಂಡು ಹಬ್ಬದ ಹಾಡಿಗೆ ಸರಳ ಚಲನೆಗಳು ಮತ್ತು ಹೆಜ್ಜೆಗಳನ್ನು ಬಳಸಿ.
- ಈ ಸಂದರ್ಭದಲ್ಲಿ ಧರಿಸುವ ಸಾಂಪ್ರದಾಯಿಕ ಉಡುಗೆಗಳನ್ನು ಚಿತ್ರಿಸಿ.

© NCERT not to be republished

© NCERT
not to be republished